ರೈತರಿಗೆ ಪರಿಹಾರ ನೀಡುವುದು

3178 (4046); ಶ್ರೀ ಡಿ.ನಾಗರಾಜಯ್ಯ (ಕುಣಿಗಲ್)

ಅ) ತುಮಕೂರು ಜಿಲ್ಲೆಯ ಕುಣಿಗಲ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹೇಮಾವತಿ ಜಲಾನಯನ ಪ್ರದೇಶದ 180 ಕಿಮೀನಿಂದ 248 ಕಿಮೀ ವರೆಗೆ ಕಾಮಗಾರಿಗಾಗಿ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡ ರೈತರಿಗೆ ಪರಿಹಾರ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಪರಿಹಾರ ನೀಡದೇ ಇರುಲು ಕಾರಣವೇನು?

ಶ್ರೀ ಎಂ.ಬಿ. ಪಾಟೀಲ (ಜಲ ಸಂಪನ್ಮೂಲ ಸಚಿವರು)

ಅ) ತುಮಕೂರು ಜಿಲ್ಲೆಯ ಕುಣಿಗಲ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹೇಮಾವತಿ ಜಲಾನಯನ ಪ್ರದೇಶದ 180 ಕಿಮೀನಿಂದ 248 ಕಿಮೀ ವರೆಗೆ ಕಾಮಗಾರಿಗಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳ ಪ್ರಕರಣಗಳ ವಿವರಗಳು ಕೆಳಕಂಡಂತಿವೆ:

ಎ) ಭಕ್ತರಹಳ್ಳಿ, ವಾಣಿಗೆರೆ, ಕುರುಡಿಹಳ್ಳಿ, ಕುರುಡಿಹಳ್ಳಿ ಚತುರ್ಭಾಗ, ಹೊನ್ನೇನಹಳ್ಳಿ, ಕೊತ್ತಗೆರೆ, ಬಾಗೇನಹಳ್ಳಿ, ಸೊಬಗಾನಹಳ್ಳಿ, ನೀಲತ್ತನಹಳ್ಳಿ ಬಿದನಗೆರೆ, ಗೊಟ್ಟಿಕೆರೆ, ಕಲ್ಲನಾಯಕನಹಳ್ಳಿ, ಎಲಿಯೂರು, ಸೋಮದೇವರ ಪಾಳ್ಯ, ಕೂತರ ಹಳ್ಳಿ, ಬೇಗೂರು, ಕಿತ್ತಾಮಂಗಲ, ಕಿತ್ತಾಮಂಗಲ ಅಮಾನಿಕೆರೆ ಈ ಗ್ರಾಮಗಳಲ್ಲಿ ಒಟ್ಟು 342 ಎಕರೆ 17 1/2 ಗುಂಟೆ ವಿಸ್ತೀರ್ಣದ ಜಮೀನು ಹೇಮಾವತಿ ನಾಲಾ ಯೋಜನೆಗೆ ಭೂಸ್ವಾಧೀನವಾಗಿ ಅವಾರ್ಡ್ ಆಗಿರುತ್ತದೆ. ಅವಾರ್ಡ್ ಮೊತ್ತ ₹ 4,56,74,467/– ಆಗಿರುತ್ತದೆ. ಈ ಪ್ರಕರಣಗಳಲ್ಲಿ ಅವಾರ್ಡ್ ನೋಟೀಸ್‌ನಲ್ಲಿ ನಮೂದಿಸಿರುವಂತೆ ಸರಿಯಾದ ದಾಖಲೆಗಳನ್ನು ಒದಗಿಸಿರುವವರಿಗೆ ಪರಿಹಾರವನ್ನು ವಿತರಿಸಲಾಗಿರುತ್ತದೆ.

ಬಿ) ಚನ್ನಾಪುರ ಪ್ರಕರಣದ ಭೂಸ್ವಾಧೀನದ ಪ್ರಕ್ರಿಯೆ ಅವಧಿ ದಿನಾಂಕ 26.01.2014 ರಂದು ಕೊನೆಗೊಂಡಿದ್ದು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ರವರಿಗೆ ಹೊಸ ಭೂಸ್ವಾಧೀನ ಕಾಯ್ದೆಯನ್ವಯ ಪುನರ್ ಪ್ರಾರಂಭಿಸಲು ನಿರ್ದೇಶನ ಕೋರಿ ಪತ್ರ ಬರೆಯಲಾಗಿದೆ.

ಸಿ) ಸೊಂಡೆಕೊಪ್ಪ, ರಾಘವನ ಹೊಸೂರು, ಪುಟ್ಟನಪಾಳ್ಯ, ಕೆ.ಹುರುಳಿ ಬೋರಸಂದ್ರ ಗ್ರಾಮಗಳ 6(1) ಅಧಿಸೂಚನೆ ಸರ್ಕಾರದಿಂದ ಅನುಮೋದನೆಯಾಗಿದ್ದು, ಗೆಜೆಟ್ ಪ್ರಕಟಣೆಗೆ ಬಾಕಿ ಇರುತ್ತದೆ.

ಕೊತ್ತಗೆರೆ, ಬಾಗೇನಹಳ್ಳಿ, ಹೊನ್ನೇನಹಳ್ಳಿ, ಕುರುಡಿಹಳ್ಳಿ, ಚಾತುರ್ಭಾಗ, ಹೊಸಪುರ, ನಾರಾಯಣಪುರ, ಸಕೇನಪುರ, ಮಾದಿವಳ್ಳಿ, ಮಟ್ಯ, ಗೌಡಗೆರೆ, ಮಾಧುಗೋನಹಳ್ಳಿ, ಪಾವಸಂದ್ರ, ಕಲ್ಲನಾಯಕನಹಳ್ಳಿ, ಮೇದೂರು, ಹೊಸೂರು, ಹೆಗ್ಗಡತಿಹಳ್ಳಿ ಗ್ರಾಮಗಳಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆಯ ಮೌಲ್ಯಮಾಪನ ಬಾಕಿ ಇದ್ದು ವರದಿ ಬಂದ ನಂತರ ಅವಾರ್ಡ್ ಪ್ರಕ್ರಿಯೆ ಕೈಗೊಳ್ಳಲಾಗುವುದು.

ಅರಕೆರೆ, ತೆಪ್ಪಸಂದ್ರ, ಕಿತ್ನಮಂಗಲ, ಅಮಾನಿಕೆರೆ, ಗವಿಮಠ, ಕಾಡಮತ್ತಿಕೆರೆ, ಕೆ.ಹುರಳಿಬೋರಸಂದ್ರ ಗ್ರಾಮಗಳ ಅವಾರ್ಡ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ತೆಪ್ಪಸಂದ್ರ, ಲಾಳಾಪುರ, ಅರಕೆರೆ, ಹೇರೂರು, ಬಸವಮತ್ತಿಕೆರೆ, ಹುರುಳಿಬೋರಸಂದ್ರ, ಚೊಟ್ನಹಳ್ಳಿ, ಕಟ್ಟಿಗೆ ಹಳ್ಳಿ, ಕೊತ್ತಗೆರೆ, ಹೊನ್ನೇನಹಳ್ಳಿ, ಬಾಗೇನಹಳ್ಳಿ, ಕಿತ್ನಮಂಗಲ, ಅಮಾನಿಕೆರೆ, ಗವಿಮಠ, ಕಾಡಮತ್ತಿಕೆರೆ, ಹೊಸಪುರ ಗ್ರಾಮಗಳಿಗೆ ಸಂಬಂಧಿಸಿದಂತೆ ಪ್ರಸ್ತಾವನೆಗಳು ಪ್ರಾಥಮಿಕ ಹಂತದಲ್ಲಿದೆ.

ಆ) ಸಂಬಂಧಪಟ್ಟ ವಿಶೇಷ ಭೂಸ್ವಾಧೀನಾಧಿಕಾರಿಗಳು ಪರಿಹಾರ ನೀಡದೇ ಇರುವ ಪ್ರಕರಣಗಳಲ್ಲಿ ಕೆಳಕಂಡ ಕಾರಣಗಳಿಂದ ಪರಿಹಾರ ವಿತರಿಸಲು ಸಾಧ್ಯವಾಗಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ.

1) ಹಕ್ಕು ದಾಖಲೆಗಳು ಸರಿಯಾಗಿಲ್ಲದ ಪ್ರಕರಣಗಳು

2) ವಿವಾದಿತ ಪ್ರಕರಣಗಳು

3) ಬ್ಯಾಂಕ್‌ಗಳಲ್ಲಿ ಸಾಲ ಪಡೆದಿರುವ ಪ್ರಕರಣಗಳು

4) ತಕರಾರು ಪ್ರಕರಣಗಳು

ಅವಶ್ಯ ದಾಖಲೆ ನೀಡುವಲ್ಲಿ ತೊಂದರೆಯಾಗಿರುವುದು

3183 (3309); ಶ್ರೀ ನರೇಂದ್ರ.ಆರ್ (ಹನೂರು)

ಅ) ರಾಜ್ಯದ ತಾಲ್ಲೂಕು ಕಛೇರಿಗಳಲ್ಲಿ ರೈತರಿಗೆ ಅವಶ್ಯವಿರುವ ದಾಖಲೆಗಳನ್ನು ಪಡೆಯಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ರೈತರಿಗೆ ಸುಲಭವಾಗಿ ದಾಖಲೆ ದೊರಕಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು (ಸಂಪೂರ್ಣ ಮಾಹಿತಿ ಒದಗಿಸುವುದು)

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ನಾಡಕಛೇರಿಯಿಂದ ಒಟ್ಟು 26 ವಿವಿಧ ಸೇವೆಗಳ ಪ್ರಮಾಣ ಪತ್ರಗಳನ್ನು ನೀಡಲಾಗುತ್ತಿದ್ದು, ಅವುಗಳಲ್ಲಿ 21 ಸೇವೆಗಳನ್ನು ಸಕಾಲದಡಿ ನಿಗದಿಪಡಿಸಿದ ಕಾಲಾವಕಾಶದಲ್ಲಿ ಸಾರ್ವಜನಿಕರಿಗೆ ನೀಡಲಾಗುತ್ತಿದೆ.

ಕಂದಾಯ ಇಲಾಖೆಯಲ್ಲಿ ನಾಡಕಛೇರಿ ಸೇವೆಗಳು, ಭೂಮಿ ಉಸ್ತುವಾರಿ ಕೋಶ, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ